ಸಿ.ಡಬ್ಲು **-1**

ದಿ: **23-01-2025** **ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಎಸ್ ಜಿ ಕೆ ವಕೀಲರಿಂದ:-**

1. 3ನೇ ವಾದಿ ನಮ್ಮ ಆಸ್ಪತ್ರೆಗೆ ದಿನಾಂಕ: 18-09-2024 ರಂದು ಹಾಜರಾಗಿದ್ದರು. 3ನೇ ವಾದಿಯನ್ನು ಆಸ್ಪತ್ರೆಗೆ ಯಾರು ಕರೆದುಕೊಂಡು ಬಂದಿದ್ದರು ನನಗೆ ನೆನಪಿಲ್ಲ. 3ನೇ ವಾದಿ ವೈಯಕ್ತಿಕವಾಗಿ ಆಸ್ಪತ್ರೆಗೆ ಬಂದಿದ್ದರೋ ಅಥವಾ ಅವರನ್ನು ಯಾರಾದರೂ ಕರೆದುಕೊಂಡು ಬಂದಿದ್ದರೋ ಎಂದರೆ ಸಾಕ್ಷಿಯು ಆಫೀಸ್ ಸ್ಟಾಫ್ ನವರು ಅವರನ್ನು ಕರೆದುಕೊಂಡು ಬಂದಿದ್ದರು ಎನ್ನುತ್ತಾರೆ. ಆಫೀಸ್ ಸ್ಟಾಫ್ ರವರು 3ನೇ ವಾದಿಯನ್ನು ಕರೆದುಕೊಂಡು ಬಂದಿದ್ದರು ಎಂದು ನಾನು ನಿ ಸಿ 1 ಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ನಿ ಸಿ 1 ದಾಖಲೆಯಲ್ಲಿ ಶಾಲಂನಾಯ್ಕ ವಯಸ್ಸನ್ನು ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿಯು ಮಾಡಿಲ್ಲ ಎನ್ನುತ್ತಾರೆ. ವೈದ್ಯಕೀಯ ನ್ಯಾಯಶಾಸ್ತ್ರದ ಅನ್ವಯ ಒಬ್ಬ ವ್ಯಕ್ತಿಯನ್ನು ತಪಾಸಣೆ ಮಾಡುವಾಗ ಅವನ ದೇಹದಲ್ಲಿರುವ ಕನಿಷ್ಟ ಎರಡು ಗುರುತುಗಳನ್ನು ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ. ಶಾಲಂನಾಯ್ಕ ಅವರು ನನಗೆ ವೈಯಕ್ತಿಕವಾಗಿ ಪರಿಚಯವಿಲ್ಲ. ನಿ ಸಿ 1 ದಾಖಲೆಯಲ್ಲಿ ಶಾಲಂನಾಯ್ಕ ರವರನ್ನು ಗುರುತು ಹಿಡಿಯಲು ಅವರ ದೇಹವನ್ನು ಗುರುತು ಹಿಡಿಯಲು ಅವರ ಬಣ್ಣ, ಅಥವಾ ಚಹರಾ ಪಟ್ಟಿ ಬಗ್ಗೆ ವಿವರ ನಮೂದು ಮಾಡಿರುವುದಿಲ್ಲ. ಶಾಲಂನಾಯ್ಕ ರವರ ವಿದ್ಯಾಭ್ಯಾಸದ ಬಗ್ಗೆ ಪ್ರಶ್ನೆ ಕೇಳಿದ್ದಿರಾ ಎಂದರೆ ಸಾಕ್ಷಿಯು ಕೇಳಿರುತ್ತೇನೆ ಎನ್ನುತ್ತಾರೆ. ಅವರು ಏನೂ ವಿದ್ಯಾಭ್ಯಾಸ ಮಾಡಿದ್ದಾನೆಂದು ನನಗೆ ಈಗ ನೆನಪಿಲ್ಲ.

2. ನೀವು ಶಾಲಂನಾಯ್ಕವರಿಗೆ ಶೇಕಡಾ 75 ಪ್ರತಿಶತ ಮಾನಸಿಕ ನ್ಯೂನತೆಯಿಂದ ಬಳಲುತ್ತಿದ್ದಾರೆಂದು ಯಾವ ಕಾರಣಗಳ ಆಧಾರದ ಮೇಲೆ ಹೇಳುತ್ತಿದ್ದಿರಾ ಎಂದರೆ ಸಾಕ್ಷಿಯು ಕ್ಲಿನಿಕಲ್ ಸೈಕಲಾಜಿ ಪ್ರಕಾರ 50% ನ್ಯೂನತೆ ಇರುವುದು ಕಂಡು ಬಂದಿರುತ್ತದೆ ಮತ್ತು ಮಾನಸಿಕರ ನ್ಯೂನತೆ ಶೇಕಡಾ 25 ಇರುವುದು ಕಂಡು ಬಂದಿರುತ್ತದೆ ಎನ್ನುತ್ತಾರೆ. ಈ ರೀತಿ ಮೇಲೆ ಹೇಳಿರುವುದನ್ನು ನಿ ಸಿ 1 ದಾಖಲೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿ ಸಿ 1 ದಾಖಲೆಯ ಜೊತೆಗೆ ಕ್ಲಿನಿಕಲ್ ಸೈಕಲಾಜಿ 50% ನ್ಯೂನ್ನತೆ ಇರುವುದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿಲ್ಲ ಎನ್ನುತ್ತಾರೆ. ನಿ ಸಿ 1 ದಾಖಲಾತಿಯ ಪ್ರಕಾರ ನೀವು ಯಾವ ಆಧಾರದ ಮೇರೆಗೆ ಶೆಕಡಾ 75 ಪ್ರತಿಶತ ಮಾನಸಿಕ ನ್ಯೂನ್ನತೆ ಇದೆ ಎಂದು ನಿಮ್ಮನ್ನು ಬಿಟ್ಟು 3ನೇ ವ್ಯಕ್ತಿಗೆ ಯಾವ ಆಧಾರದಲ್ಲಿ ಬಂದಿದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಅರುಣ ಕುಲಕರ್ಣಿ ಎನ್ನುವವರು ಕ್ಲಿನಿಕಲ್ ಸೈಕಲಾಜಿಸ್ಟ್ ಆಗಿ ಶಾಲಂನಾಯ್ಕ ರವರ ಶೇಕಡಾ 50 ಪ್ರತಿಶತ ನ್ಯೂನ್ನತೆ ಇರುವುದನ್ನು ಪರೀಕ್ಷಿಸಿರುತ್ತಾರೆ. ನಾನು ಸೈಕ್ಯಾಟಿಸ್ಟ್ ಆಗಿರುತ್ತೇನೆ. ಶೇಕಡಾ 25 ಮಾನಸಿಕ ರೋಗ ಇದೆ ಎಂದು ನೀವು ದಾಖಲಾತಿಯನ್ನು ಕೊಟ್ಟಿದ್ದಿರಾ ಎಂದರೆ ಸಾಕ್ಷಿಯು ಕೊಟ್ಟಿಲ್ಲ ಎನ್ನುತ್ತಾರೆ.

3. ಶಾಲಂನಾಯ್ಕ ನಿಗೆ ಸುಮಾರು 10 ವರ್ಷದ ಮಾನಸಿಕ ರೋಗದ ಇತಿಹಾಸ ಇರುತ್ತದೆ. ಅವರಿಗೆ ಸಂಬಂಧಪಟ್ಟ ಹಿಂದಿನ ಧಾರವಾಡ ಆಸ್ಪತ್ರೆಯ ದಾಖಲಾತಿಗಳನ್ನು ಹಾಜರು ಮಾಡಿದ್ದರು. ಅವರಿಗೆ ಬೈಪೋಲಾ ಡಿಸ್ ಆರ್ಡ್ ರ್ ಆಲ್ಕೋಹಾಲ್ ಡಿಪೆಂಡೆಂಟ್ ಸಿಂಡ್ರೋಮ್ ಆರೋಗ್ಯ ಸಮಸ್ಯೆ ಇತ್ತು. ಸದರಿ ಮಾನಸಿಕ ರೋಗವು ವೈದ್ಯಕಿಯವಾಗಿ ಉಪಚಾರದಿಂದ ಗುಣಪಡಿಸಬಹುದಾದ ರೋಗ

ಆಗಿರುತ್ತದೆ ಎಂದರೆ ಸರಿ. ವೈದ್ಯಕೀಯ ಉಪಚಾರದಲ್ಲಿ ಅಂತಹ ರೋಗಿ ದಿನನಿತ್ಯದ ವ್ಯವಹಾರಗಳನ್ನು ಮಾಡುವಂತಹ ಅರ್ಹತೆ ಹೊಂದಿರುತ್ತಾರೆ ಎಂದರೆ ಸರಿ. ನಿ ಸಿ 1 ರ ದಾಖಲೆಯ ಜೊತೆಗೆ ಕ್ಲಿನಿಕಲ್ ಸೈಕಲಾಜಿಸ್ಟ್ ರವರು 50 ಪ್ರತಿಶತ ನ್ಯೂನ್ನತೆ ಇದೆ ಎಮದು ತೋರಿಸಲು ದಾಖಲಾತಿ ಹಾಜರು ಮಾಡಿಲ್ಲ ಎಂದರೆ ಸರಿ. ಐ ಕ್ಯೂ ಟೆಸ್ಟ್ ನ್ನು ಕ್ಲಿನಿಕಲ್ ಸೈಕಾಲಾಜಿಸ್ಟ್ ಆಗಿರುವ ಅರುಣಕುಲಕರ್ಣಿಯವರು ಮಾಡಿರುತ್ತಾರೆ. ಐ ಕ್ಯೂ ಟೆಸ್ಟ್ ನ ಬಗ್ಗೆ ನನಗೆ ಮಾಹಿತಿ ಇಲ್ಲ ಕ್ಲಿನಿಕಲ್ ಸೈಕಾಲಾಜಿಸ್ಟ್ ಅರುಣ ಕುಲಕರ್ಣಿಯವರಿಗೆ ಮಾಹಿತಿ ಇದೆ. ನಿ ಸಿ 1 ದಾಖಲೆಯ ಪ್ರಕಾರ ಆಭಿಪ್ರಾಯವು ನಿಮ್ಮ ಒಬ್ಬರದೆ ಆಗಿದೆಯೋ ಅಥವಾ ಜಂಟಿ ಅಭಿಪ್ರಾಯವಾಗಿದೆ ಎಂದರೆ ಸಾಕ್ಷಿಯು ಕ್ಲಿನಿಕಲ್ ಸೈಕಲಾಜಿಸ್ಟ್ ರವರ ಆಭಿಪ್ರಾಯವನ್ನು ಪರಿಶೀಲಿಸಿ ನನ್ನ ಅಭಿಪ್ರಾಯದಲ್ಲಿ ನಿ ಸಿ 1 ದಾಖಲೆಯನ್ನು ನೀಡಿರುತ್ತೇನೆ. ನಿ ಸಿ 1 ದಾಖಲೆಯ ಪ್ರಕಾರ ಫಿಜಿಷಿಯನ್, ಡಿಸ್ಟಿಕ್ ಸರ್ಜನ್, ಮತ್ತು ನೀವು ಯಾವ ಯಾವ ಪರೀಕ್ಷೆಯನ್ನು ಮಾಡಿ ಸದರಿ ಅಂತಿಮ ಅಭಿಪ್ರಾಯಕ್ಕೆ ಬಂದಿದ್ದಿರಾ ಎಂದು ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿಯು ನಮೂದು ಮಾಡಿಲ್ಲ ಎನ್ನುತ್ತಾರೆ. ಒಬ್ಬ ವ್ಯಕ್ತಿಯ ಮಾನಸಿಕ ಬುದ್ದಿ ಸಾಮರ್ಥ್ಯ ಅಳೆಯಬೇಕಾದರೆ ಇಂಟಲಿಜೆನ್ಸ್ ಕೋಷನ್ ಗಳನ್ನು ಕೇಳಿ ಅದರ ಆಧಾರದ ಮೇಲೆ ನಿರ್ದಾರ ಮಾಡಬೇಕಾಗುತ್ತದೆ ಎಂದರೆ ಸರಿ. ನಿ ಸಿ 1 ದಾಖಲೆಯಲ್ಲಿ ಶಾಲಂನಾಯ್ಕ್ ನ ಐ ಕ್ಯೂ ಎಷ್ಟು ಪ್ರತಿ ಶತ ಇದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿಯ ಗರಿಷ್ಟ ಐ ಕ್ಯೂ ಮತ್ತು ಕನಿಷ್ಟ ಐ ಕ್ಯೂ ಎಷ್ಟಾಗಿದೆ ಎಂದರೆ ಸಾಕ್ಷಿಯು ನಮ್ಮ ಅದ್ಯಯನದ ಪ್ರಕಾರ ಎಲಾನ್ ಮಸ್ಕ ರವರು 190 ಐ ಕ್ಯೂ ಉಳ್ಳವರಾಗಿರುತ್ತಾರೆ ಕನಿಷ್ಟ ಐ ಕ್ಯೂ 20 ಕ್ಕಿಂತ ಕಡಿಮೆ ಉಳ್ಳವರಾಗಿರುತ್ತಾರೆ.

4. ನಿ ಸಿ 1 ದಾಖಲೆಯನ್ನು ನಾನು ವೈದ್ಯಕೀಯ ಅಧಿಕ್ಷಕರಿಗೆ ವಹಿಸಿದ್ದೇನೆ. ನ್ಯಾಯಲಯಕ್ಕೆ ನಿ ಸಿ 1 ದಾಖಲೆಯನ್ನು ಯಾರು ಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ. ಐಡಿಯಾಸ ಟೂಲ್ ಕಿಟ್ ನಲ್ಲಿ ಪರೀಕ್ಷೆಗೆ ಒಳಪಡಿಸಿದಾಗ ಅದರ ನಡವಳಿಕೆಗಳನ್ನು ಬರೆದಿಲ್ಲ. ಅದೇ ಪ್ರಕಾರ ಡಿ ಎಸ್ ಟೂಲ್ ಕಿಟ್ ನಲ್ಲಿ ಪರೀಕ್ಷೆಗೊಳಪಡಿಸಿದಾಗ ಅದರ ನಡುವಳಿಕೆಗಳನ್ನು ಬರೆದಿಲ್ಲ. ಅದೇ ಪ್ರಕಾರ ಐ ಕ್ಯೂ ಟೆಸ್ಟ್ ನ ಪರೀಕ್ಷೆಗೊಳಪಡಿಸಿದಾಗ ಅದರ ನಡುವಳಿಕೆಗಳನ್ನು ಬರೆದಿಲ್ಲ. ನಿಮ್ಮ ಅಂತಿಮ ಅಭಿಪ್ರಾಯದ ಜೊತೆಗೆ ಐ ಕ್ಯೂ ಟೆಸ್ಟ್ ನ ನಡವಳಿಕೆ, ಐಡಿಯಾಸ ಟೂಲ್ ಕಿಟ್ ನಡವಳಿಕೆ , ಡಿ ಎಸ್ ಟೂಲ್ ಕಿಟ್ ನ ನಡವಳಿಕೆ ಕೊಟ್ಟಿಲ್ಲ ಎಂದರೆ ಸರಿ. ನಿ ಸಿ 1 ದಾಖಲೆಯಲ್ಲಿ ನೀವು ಅಂತಿಮ ಅಭಿಪ್ರಾಯಕ್ಕೆ ಬರುವುದಕ್ಕೆ ಕಾರಣಗಳನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ಕೊಡಲು ಆಗುವುದಿಲ್ಲ ಎನ್ನುತ್ತಾರೆ. ಈ ರೀತಿ ಕಾರಣಗಳನ್ನು ಕೊಡಲು ಆಗುವುದಿಲ್ಲ ಎಂದು ವೈದ್ಯಕೀಯ ನ್ಯಾಯಾ ಶಾಸ್ತ್ರದಲ್ಲಿ ಅಥವಾ ನಿಮ್ಮ ಮೆಡಿಕಲ್ ಬೋರ್ಡ್ ನ ನಿಯಮಾವಳಿಗಳಲ್ಲಿ ಇದೆಯಾ ಎಂದರೆ ಸಾಕ್ಷಿಯು ಇದೆ ಎನ್ನುತ್ತಾರೆ ಸಾಕ್ಷಿಯನ್ನು ಸರಿಯಾಗಿ ಉತ್ತರ ಕೊಡಲು ಸೂಚಿಸಿದಾಗ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಈ ಕೇಸಿನ ಉಳಿದ ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರವನ್ನು ಕೊಟ್ಟಿದ್ದೀರಾ ಎಂದರೆ ಸರಿಯಲ್ಲ. ನಾನು ಡಿಸ್ಟ್ರಿಕ್ ಸೈಕಾಟಿಸ್ಟ್ ಆಗಿರುವುದಿಲ್ಲ ಅಸೋಸಿಯೇಟ್ ಪ್ರೋಫೇಸರ್ ಆಗಿರುತ್ತೇನೆ. ನ್ಯಾಯಾಲಯದಿಂದ ನೀಡಿರುವ ಪತ್ರವನ್ನು ಅಧೀಕ್ಷಕರು ಸ್ವೀಕರಿಸಿರುತ್ತಾರೆ. ನಿ ಸಿ 1 ದಾಖಲೆಯನ್ನು ನಿಮ್ಮ ಇಲಾಖೆಯ ವೈದ್ಯರು ಖುದ್ದಾಗಿ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಶಾಲಂನಾಯ್ಕ ರವರನ್ನು ವೈದ್ಯಕೀಯ ಪರೀಕ್ಷಗೆ ಒಳಪಡಿಸದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿ ಸಿ 1 ರಲ್ಲಿ ನಮೂದು ಮಾಡಿದಂತಹ ಯಾವುದೇ ಮಾನಸಿಕ ನ್ಯೂನ್ಯತೆಗಳು

ಶಾಲಂನಾಯ್ಕರಿಗೆ ಇಲ್ಲ ಎಂದರೆ ಸರಿಯಲ್ಲ. ನಿ ಸಿ 1 ರಂತೆ ನೀವು ಯಾವುದೇ ಟೆಸ್ಟ್ ಗಳನ್ನು ಮಾಡಿರುವುದಿಲ್ಲ ಅದೆ ಕಾರಣ ನೀವು ಯಾವುದೆ ದಾಖಲೆಗಳು ಹಾಜರು ಮಾಡಿಲ್ಲ ಎಂದರೆ ಸರಿ. ನೀವು ಕೊಟ್ಟಿರುವಂತಹ ಪ್ರಮಾಣ ಪತ್ರ ಮೆಡಿಕಲ್ ಬೋರ್ಡ್ ಗೆ ವ್ಯತಿರಕ್ತವಾಗಿದೆ ಎಂದರೆ ಸುಳ್ಳು. ಉಳಿದ ವಾದಿಯರ ಮಾತುಗಳನ್ನು ಕೇಳಿ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ